ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ ಮತ್ತು ನಮ್ಮ ಸದನದ ಅನೇಕ ದೈನಂದಿನ ಕಾರ್ಯಕಲಾಪಗಳಿಗೆ ತಾವು ಅವಕಾಶ ಮಾಡಿಕೊಡಿ. ಆ ವಿಚಾರದಲ್ಲಿ ನಾವು ಉತ್ತರವನ್ನು ಕೂಡಲೂ ಕೂಡ ತಯಾರಿದ್ದೇವೆ.

3.50 ಪಿಎಂ

ಅಧ್ಯಕ್ಷರು : ಮಾನ್ಯ ನಂಜೇಗೌಡರು ಪ್ರಸ್ತಾಪ ಮಾಡಿದಂತಹ ವಿಚಾರವನ್ನು ನಾನು ಗಮನಿಸಿದ್ದೇನೆ. ಅದಕ್ಕೆ ಬದಲಾಗಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿದ ವಾದವನ್ನೂ ಸಹ ನಾನು ಕೇಳಿದ್ದೇನೆ. ಮಾನ್ಯ ವೀರಪ್ಪಮೊಯಿಲಿಯವರು ಹೇಳಿದಂತಹ ಮಾತುಗಳನ್ನು ಕೇಳಿದ್ದೇನೆ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ತಂತ್ರ ಪ್ರತಿ ತಂತ್ರ, ಮಾತು ಪ್ರತಿ ಮಾತು ಇವೆಲ್ಲಾ ನಿಮ್ಮ ಮತ್ತು ಅವರ ಮಧ್ಯೆ ಇರಬೇಕಾಗಿರುತ್ತದೆ. ತಾವುಗಳು ಮಾತು ಮಾತಿಗೂ ಸರ್ವಾಧಿಕಾರ ನನ್ನ ಕಡೆ ಇರುತ್ತದೆ ಎಂದು ಹೇಳಿದ್ದೀರಿ, ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಳ್ಳುವಂತಹ ಯಾವುದೇ ವ್ಯಕ್ತಿಗೆ ಈ ಸದನ ಕೊಡುವಂತಹ ಪರಮೋಚ್ಚ ಅಧಿಕಾರ ಏನು ಇರುತ್ತದೆ, ಇದು ವಿಶ್ವಾಸ ಮತ್ತು ನಂಬಿಕೆ ಎನ್ನುವಂತಹ ಸ್ತಂಭದ ಆಧಾರದ ಮೇಲೆ ಇರುತ್ತದೆಯೇ ಹೊರತು ಮನಸೋ ಇಚ್ಛೆ ವಿನಿಯೋಗಿಸುವಂತಹ ಸರ್ವಾಧಿಕಾರವಾಗಿರುವುದಿಲ್ಲ. ನೈತಿಕತೆಯ ಪ್ರಶ್ನೆ ಬಂದಾಗ ಮಾನ್ಯ ಪ್ರಕಾಶ್‌ರವರು ಹೇಳಿದಂತಹ ಮಾತನ್ನು ಸಹ ನಾನು ಕೇಳಿದ್ದೇನೆ. ನೈತಿಕತೆ ಮತ್ತು ನಿಯಮಗಳನ್ನು ಸಂದರ್ಭಕ್ಕೆ ಅನುಸಾರವಾಗಿ ತಾವು ವಾದವನ್ನು ಮಂಡಿಸುವಾಗ ಬಳಸುವಂಥಾದ್ದು ಸರಿಯೇ, ಆದರೆ ಅವು ನಮ್ಮ ಚಾಲನೆಯನ್ನು ನಿಗ್ರಹಿಸುವಂತಹ ಒಂದು ವಿಧಿಗಳಾಗಿರಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ನಾನು ನೋಟೀಸ್ ಅನ್ನು ಸ್ವೀಕಾರ ಮಾಡಿದ್ದು 3.10 ನಿಮಿಷಕ್ಕೆ ಅದು ಯಾವಾಗ ಬರಬೇಕಾಗಿತ್ತು ಅದನ್ನು ಯಾವಾಗ ತೆಗೆದುಕೊಳ್ಳಬೇಕಾಗಿತ್ತು, ಎಂಬ ವಿಚಾರಕ್ಕೆ ನಾನು ಈಗ ಹೋಗುತ್ತಾ ಇಲ್ಲ. ನಾನು ತಮ್ಮೆಲ್ಲರನ್ನು ವಿನಂತಿಸಿಕೊಳ್ಳುವುದು ಇಷ್ಟೆ, ಇನ್ನು ಈಗ 4.10 ಗಂಟೆಯಾಗಿದೆ. ಈಗ 20 ನಿಮಿಷಗಳ ಕಾಲ ಸಭೆಯನ್ನು ಮುಂದೂಡಿ ನಾನು ಕಾರ್ಯದರ್ಶಿಯವರ ಜೊತೆಯಲ್ಲಿ ಚರ್ಚೆ ಮಾಡಬೇಕು. ನಾನು ಮುಂದೆ ಯಾವ ರೀತಿಯಲ್ಲಿ ಹೆಜ್ಜೆ ಇಡಬೇಕೆನ್ನುವಂತಹ ವಿಚಾರದಲ್ಲಿ ಏಕಾಏಕಿ ಇಲ್ಲಿ ಕುಳಿತುಕೊಂಡು ನಿರ್ಣಯವನ್ನು ತೆಗೆದುಕೊಳ್ಳುವಂತಹ ಸ್ಥಿತಿಯಲ್ಲಿ ನಾನು ಇಲ್ಲ, ನನಗೆ ಅನುಭವದ ಕೊರತೆ ಇದೆ. ಆತುರ ಪಡುತ್ತೇನೇನೊ ಎಂಬ ಆತಂಕ ಕೂಡ ಇದೆ. ಆದುದರಿಂದ ನಾನು ಮಾಡುವಂತಹ ಕೆಲಸ ಸದನದಲ್ಲಿ ಒಂದು ಹೊಸ ಪದ್ಧತಿಯನ್ನು ಸೃಷ್ಟಿ ಮಾಡುವುದಕ್ಕೆ ಕೂಡ ಆಗುವುದಿಲ್ಲ. ಆದುದರಿಂದ ಸಭೆಯನ್ನು 20 ನಿಮಿಷಗಳ ತರುವಾಯ ಪುನಃ ಸೇರೋಣ. ದಯಮಾಡಿ ಎಲ್ಲರೂ ಸಹಕರಿಸಬೇಕು. ಈಗ ಸಭೆಯನ್ನು 20 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸಭೆಯು ಗಂಟೆ 3.53ಕ್ಕೆ ಮುಕ್ತಾಯಗೊಂಡು ಮತ್ತೆ 20 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು).

(ಶ್ರೀ ಎಸ್. ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

(ಮಾನ್ಯ ವಿರೋಧಪಕ್ಷದ ಸದಸ್ಯರು ಮಾನ್ಯ ಅಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ಧರಣಿ ಕುಳಿತಿದ್ದರು)